ಇದು ಶಾಸಕರುಗಳಿಗೆ ಅವಮಾನವಲ್ಲವೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಮಾಡಿದ ಅವಮಾನ ವೆಂದು ಈ ಪದ್ಧತಿಯನ್ನು ತಪ್ಪಿಸಿ ರಾಜ್ಯದಲ್ಲಿ ಲೋಕಸಭಾ ಮತ್ತು ಶಾಸನಸಭಾ ಸದಸ್ಯರುಗಳು ಆಯಾಯ ಕ್ಷೇತ್ರಗಳಲ್ಲಿ ಇಂತಹ ಸಮಾರಂಭಗಳಲ್ಲಿ ರಾಷ್ಟ್ರಧ್ವಜ ಆರೋಹಣ ಮಾಡುವ ಅವಕಾಶವನ್ನು ಶಾಸಕರು ಮತ್ತು ಲೋಕಸಭಾ ಸದಸ್ಯರುಗಳಿಗೆ ಕೊಟ್ಟು ಪ್ರಜಾಪ್ರಭುತ್ವ ಪದ್ಧತಿಗೆ ಬೆಲೆ ಬರುವಂತೆ ಕ್ರಮ ಕೈಗೊಳ್ಳಬೇಕೆಂದು ಶಾಸಕನಾದ ನಾನು ೨೦-೮-೧೯೮೬ರಂದು ಸಿಖಿಳನೇ ನಿಯಮದ ಕೆಳಗೆ ಈ ಸದನದಲ್ಲಿ ಸರಕಾರವನ್ನು ಒತ್ತಾಯಿಸಿದ್ದೆ. ಆದರೂ ಸಹ ಈ ವರೆಗೆ ಈ ಬಗ್ಗೆ ಯಾವುದೇ ಬದಲಾವಣೆಯಾಗಿಲ್ಲ. ಇಂದಿನವರೆಗೆ ಸರಕಾರಿ ಅಧಿಕಾರಿಗಳು ಈ ಅವಕಾಶವನ್ನು ಅನುಭವಿಸುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಶಾಹಿ ಮನೋಭಾವವನ್ನು ಜನ ಸಹಿಸಲಾರರು. ಇದು ಪರೋಕ್ಷವಾಗಿ ಜನತೆಗೆ ಮಾಡಿದ ಅವಮಾನವಾಗಿರುತ್ತದೆ. ತಕ್ಷಣ ಈ ಪದ್ಧತಿಯನ್ನು ಬದಲಾಯಿಸ ಬೇಕೆಂದೂ ಹಾಗೂ ಈ ಬಗ್ಗೆ ಶಾಸಕರು ಮತ್ತು ಜನತೆಗೆ ಬರವಸೆ ಕೊಡಬೇಕೆಂದು ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಅಧ್ಯಕ್ಷರೇ, ರಾಷ್ಟ್ರದ ಧ್ವಜವನ್ನು ಆರೋಹಣ ಮಾಡುವ ಬಗ್ಗೆ ಪಾಲಿಸಬೇಕಾದ ನಿಯಮಗಳನ್ನು ಭಾರತ ಸರ್ಕಾರವು ರೂಪಿಸಿದೆ ಮತ್ತು ಅದನ್ನು ಭಾರತ ಸರ್ಕಾರದ ಒಳಾಡಳಿತ ಸಚಿವಾಲಯದಲ್ಲಿ ಹೊರಡಿಸಿರುವ ಭಾರತದ ಫ್ಲ್ಯಾಗ್ ಕೊಡ್‌ನಲ್ಲಿ ಸೇರಿಸಲಾಗಿದೆ. ಪರಂಪರೆಯಂತೆ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಹಿರಿಯ ಸರ್ಕಾರಿ ಪ್ರತಿನಿಧಿಗಳು ಅಂದರೆ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಪುಟದ ಸಚಿವರು, ಆಯುಕ್ತರುಗಳು, ಜಿಲ್ಲಾಧಿಕಾರಿಗಳು ವಂದನೆಗಳನ್ನು ಸ್ವೀಕರಿಸುವಂತೆ ಭಾರತ ಸರ್ಕಾರವು ತಿಳುವಳಿಕೆ ನೀಡಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರುಗಳು ಹಿರಿಯ ಪ್ರತಿನಿಧಿಗಳಾದುದರಿಂದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳಲ್ಲಿ ಅವರು ರಾಷ್ಟ್ರಧ್ವಜ ಆರೋಹಣ ಮಾಡಿ ವಂದನೆಯನ್ನು ಸ್ವೀಕರಿಸಬಹುದಾಗಿದೆ.

ಈ ಪದ್ಧತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬೇಕಾದರೂ ಕೂಡ ಅದನ್ನು ಕೇಂದ್ರ ಸರ್ಕಾರದವರೆ ಮಾಡಬೇಕಾಗಿದೆ.

7. Drinking water Problem in Hubli-Dharwar City

SRI A.M. HINDUSGERI (Hubli).—The people of Hubli-Dharwad are facing severe drinking water problems for quite a long time. I wanted to know from the Hon'ble Minister of Urban Development how much money that has been sanctioned for the Malaprabha Water Supply Scheme, II Stage and when this project would be taken up for implementation ?

SRI M. RAGHUPATHY (Minister for Ports and Fisheries).—On behalf of the Minister for Urban Development I may be permitted to make the following statement.—

"The population of Hubli Dharwad City as per 1981 Census is 5,26,000 and the present population is estimated to be 6,50,000.

The water supply to Hubli Dharwad City is from two sources.—

1. From Neerasagara lake to an extent of 9.00 MGD

2. From Malaprabha Water Supply Scheme Its stage to an extent of 7.50MGD and(3)from Borewells.

The rate of Water supply worked out to about 25 GPCD.

Due to scanty rainfall in the catchment during 1986 and 1987. Neerasagara lake did not get water and has dried up and as such, Hubli Dharwad cities faced shortage of water. The present water supply to the town is from Malaprabha Water Supply Scheme Ist stage and from 210 Borewells and from unkal tank and about 3 MGD from Neerasagara lake from January 1984 is of the order of 16 GPCD. In view of this it has been found very necessary to take up the IInd stage of Malaprabha Water supply scheme costing Rs. 308.00 lakhs. Sanction to the estimate is awaited. The project contemplates for providing Raw water pumping machineries at stations I and II, at Soundathi, construction of 7.50 MGD filters' construction of 10.00 lakh gallons capacity GLSR at Soundathi, providing Pure Water Pumping machineries at Aminbhavi, construction of 10.00 lakh gallons capacity GLSR at Aminbhavi and other allied works. A provision of Rs. 20.00 lakhs has been made in the budget estimate of 1988-89. The work will be taken up as soon as the sanction to the Estimate is communicated by the Government. HDMC is due in all Rs 294,59 lakhs to the Board, as on 1.1.1988 excluding Power charges which is about Rs, 3 crores.

Keeping in view all this, the water supply in Hubli-Dharwad will be streamlined in this year.

ಕಾಪು ಕ್ಷೇತ್ರದಲ್ಲಿ ಬಡಜನತೆಗೆ ನಿವೇಶನದ ಹಕ್ಕು ಪತ್ರಗಳ ನೀಡಿಕೆ

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಉಡುಪಿ ತಾಲ್ಲೂಕು ಕಾಪು ಕ್ಷೇತ್ರದ ಹೆಜಮಾಡಿ, ಪಡುಬಿದ್ರೆ, ಉಚಿಲ, ಕಾಪು, ಕಟಪಾಡಿ, ಶಿರ್ವಾ, ಮುದರಂಗಡಿ, ಮಂತ್ತು ಬೆಳ್ಳೆ ಮಂಡಲಗಳಲ್ಲಿ ಬಡವರು ಮನೆ ನಿವೇಶನಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸುಮಾರು ೩ ವರ್ಷಗಳಾದರೂ ಈವರೆಗೂ ಅಂತಹ ಬಡವರಿಗೆ ನಿವೇಶನದ ಹಕ್ಕುಪತ್ರ ದೊರಕಲಿಲ್ಲ. ಹಕ್ಕುಪತ್ರಗಳು ಉಡುಪಿ ತಾಲ್ಲೂಕು ಕಚೇರಿಯಲ್ಲಿ ವಿತರಣೆಗಾಗಿ ಸಿದ್ಧವಾಗಿದ್ದರೂ ಉಡುಪಿ ತಹಶೀಲ್ದಾರರು ಅದನ್ನು ವಿತರಣೆ ಮಾಡಿಲ್ಲ. ಇದರಿಂದಾಗಿ ಈ ಪ್ರದೇಶದ ಜನರಿಗೆ ಹೊಸ್ಕೋ ಮನೆ, ಜನತಾ ಮನೆ ಮತ್ತು ಬ್ಯಾಂಕುಗಳ ಮೂಲಕ ಸಾಲ ಪಡೆದು ಮನೆ ಕಟ್ಟಲು ತೊಂದರೆಯಾಗಿದೆ. ಸರಕಾರವು ಇದನ್ನು ಕೂಡಲೇ ಪರಿಶೀಲಿಸಿ ಅದಷ್ಟು ಬೇಗನೆ ಈ ಅರ್ಜಿದಾರರಿಗೆ ಹಕ್ಕುಪತ್ರಗಳನ್ನು ಕೊಡಿಸಬೇಕಾಗಿ ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಉತ್ತರವನ್ನು ತರಿಸಿ ಕೊಡುತ್ತೇನೆ.

೯. ಪ್ರೌಢಶಾಲೆಯ ವೃತ್ತಿ ಶಿಕ್ಷಕರು ಮತ್ತು ಚಿತ್ರಕಲಾ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿ ನೀಡಿಕೆ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಶಾಲಾ ವೃತ್ತಿ ಶಿಕ್ಷಕರಿಗೂ ಮತ್ತು ಚಿತ್ರಕಲಾ ಶಿಕ್ಷಕರಿಗೂ ನೀಡಿರುವ ಹೈದರಾಬಾದ್ ವೇತನ ಶ್ರೇಣಿಯನ್ನು ಪ್ರೌಢಶಾಲಾ ವೃತ್ತಿ ಮತ್ತು ಚಿತ್ರಕಲಾ ಶಿಕ್ಷಕರಿಗೆ ನೀಡಿರುವುದಿಲ್ಲ. ೧೯೭೭ಕ್ಕೆ ಮೊದಲು ಇದ್ದ ವೇತನ ಶ್ರೇಣಿಯನ್ನು ವೃತ್ತಿಶಿಕ್ಷಕರಿಗೆ ಸಮಾನಾಂತರಿಸಿರುವುದಿಲ್ಲ. ವೇತನ ಪುನರ್ ವಿಮರ್ಶಿಸಿದಾಗ ಪ್ರೌಢಶಾಲಾ ವೃತ್ತಿ ಶಿಕ್ಷಕರ ವೇತನ ಶ್ರೇಣಿಯನ್ನು ಕಡಿತಗೊಳಿಸಿರುವುದು ತೀರಾ ಅನ್ಯಾಯವಾಗಿದೆ. ಪದವೀಧರ ಅಧ್ಯಾಪಕರ ವೇತನವನ್ನು ಪರಿಷ್ಕರಿಸಿದಾಗ ಪ್ರೌಢಶಾಲಾ ವೃತ್ತಿಶಿಕ್ಷಕರ ವೇತನವನ್ನು ಪರಿಷ್ಕರಿಸಬೇಕು.